**ದಿನಾಂಕ 30/05/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಯರ ಪರವಾಗಿ ಶ್ರೀ ಯು.ಆರ್.ಎಸ್. ವಕೀಲರಿಂದ**

ಮೊದಲನೇ ಪ್ರತಿವಾದಿ ನನಗೆ ತಂದೆ ಎಂದರೆ ಸರಿ. ನನ್ನ ತಂದೆಗೆ 4 ಗಂಡು, ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ನನ್ನ ತಂದೆ ಸರ್ಕಾರಿ ಶಿಕ್ಷಕರು ಎಂದರೆಸ ರಿ. ನನ್ನ ತಂದೆಗೆ ಸರ್ಕಾರದಿಂದ ಸಂಬಳ ಬರುತ್ತಿತ್ತು ಎಂದರೆ ಸರಿ. ನನ್ನ ತಂದೆಗೆ ನಿವೃತ್ತಿಯಾದ ನಂತರ ಸರ್ಕಾರದಿಂದ ಹಣವೂ ಬಂತೆಂದರೆ ಸರಿ. ಈಗೇಲೂ ನನ್ನ ತಂದಗೆ ಪಿಂಚಣಿ ಹಣ ಬರುತ್ತಾ ಇದೆ ಎಂದರೆ ಸರಿ.

2 ನಮ್ಮ ತಾತನ ತಂದೆ ನಂಜೇಗೌಡ ಅಲಿಯಾಸ್ ಕಾಳೇಗೌಡ ಎಂದರೆ ಸರಿ. ನಂಜೇಗೌಡ ಅಲಿಯಾಸ್ ಕಾಳೇಗೌಡರಿಗೆ ಎಷ್ಟು ಮಂದಿ ಮಕ್ಕಳೆಂದು ನನಗೆ ಗೊತ್ತಿಲ್ಲ. ನಂಜೇಗೌಡ ಅಲಿಯಾಸ್ ಕಾಳೇಗೌಡರಿಂದ 6 ಮಂದಿ ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ 6 ಮಂದಿ ಎಂದರೆ ಕರೀಗೌಡ, ಚಿಕ್ಕೇಗೌಡ, ಮಾಟೇಗೌಡ, ಮರೀಗೌಡ, ನಂಜೆಗೌಡ, ಚೆಲುವೇಗೌಡ ಎಂದರೆ ಇರಬಹುದು. ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು ಅಪ್ಪೇಗೌಡ ಮತ್ತು ನನ್ನ ತಂದೆ ಕಾಳೇಗೌಡ ರವರು ಹಂಚಿಕೊಂಡಿದ್ದರು ಎಂದರೆ ಸರಿ. ದಾವಾ ಬಿ ಷೆಡ್ಯೂಲ್ ಆಸ್ತಿಗಳು ದರಕಾಸ್ತಿನ ಮುಖಾಂತರ ಬಂದಿರುವ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಸಾವುಕ್ಷಿ ಹೇಳುತ್ತಾರೆ ಅದು ನನ್ನ ತಾತನ ಪಿತ್ರಾರ್ಜಿತ ಆಸ್ತಿ ಎಂದು. ದಾವೆ ಸಿ ಷೆಡ್ಯೂಲ್ ಸ್ವತ್ತುಗಳು ನನ್ನ ತಂದೆ ಆತನ ಸ್ವಯಾರ್ಜಿತದಿಂದ ಸಂಪಾದಿಸಿದಂತಹ ಆಸ್ತಿಗಳಾಗಿದ್ದವು ಎಂದರೆ ಸರಿಯಲ್ಲ. ಸರ್ವೆ ನಂ. 74-4 ರ 16 ಗುಂಟೆ ಜಮೀನನ್ನು ನನ್ನ ತಂದೆ ಕಜುಮಾರ್ ಇರವರಿಗೆ 06.01.2017 ರಂದು ನೋಂದಾಯಿತ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನನಗೆ ಮೋಸ ಮಾಡಬೇಕೆಂದು ಮಾಡಿದ್ದಾರೆ ಎಂದು. ದಾವೆ ಸಿ ಷೆಡ್ಯೂಲ್ 2 ನೇ ಐಟಂ ಆಸ್ತಿಯನ್ನು ತಂದೆ 3 ನೇ ಪ್ರತಿವಾದಿಗೆ ದಾನ ಮಾಡಿದ್ದರೆ ಎಂದರೆ ಸಾಕ್ಷಿ ಹೇಳುತ್ತಾರೆ ನನಗೆ ಮೋಸ ಮಾಡಬೇಕೆಂದು ಮಾಡಿದ್ದಾರೆ ಎಂದು. ಈ ಕಾರಣದಿಂದಾಗಿ ದಾವಾ ಷೆಡ್ಯೂಲ್ 1 ಮತ್ತು 2 ನೇ ಆಸ್ತಿಗಳು 2 ಮತ್ತು 3 ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳಾಗಿರುತ್ತದೆ ಎಂದರೆ ಸರಿಯಲ್ಲ. ದಾನಪತ್ರದ ಆಧಾರದ ಮೇರೆಗೆ 2 ಮತ್ತು ನೇ ಪ್ರತಿವಾದಿಗಳ ಹೆಸರಿಗೆ ಖಾತೆಯೂ ಆಗಿದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು. ತಹಶೀಲ್ದಾರರ ನ್ಯಾಯಾಲಯದ ಮುಂದೆ ಆದದಂತಹ ನಡವಳಿಕೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಿನೋ ಇಲ್ಲವೋ ನನ್ನ ವಕೀಲರಿಗೆ ಗೊತ್ತು. ತಹಶೀಲ್ದಾರರ ನ್ಯಾಯಾಲಯದಲ್ಲಿ ನಾನು ಸಲ್ಲಿಸಿರುವ ಅರ್ಜಿ ಸಮಂಜಸವಲ್ಲ ಎಂದು

ವಜಾ ಆಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಹೇಳುತ್ತಾರೆ ಮೋಸದಿಂದ ಆಗಿದೆ ಎಂದು. ದಾನಪತ್ರ ಆದಾಗಿನಿಂದಲೂ 2 ರಿಂದ 4 ನೇ ಪ್ರತಿವಾದಿಗಳೇ ಜಮೀನನ್ನು ಅನುಭೋಗಿಸಿಕೊಂಡು ಅಭಿವೃದ್ಧಿಯನ್ನು ಪಡಿಸುತ್ತಿದ್ದಾರೆ ಎಂದರೆ ಸಯಲ್ಲ.

2. ಖಾತೆ ಅಕ್ರಮವಾಗಿ ಆಗಿದೆ ಎಂದು ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಾಧಿಕಾರ ಅಥವಾ ನ್ಯಾಯಾಲಯದ ಮುಂದೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಡಿ ಷೆಡ್ಯೂಲ್ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಸ್ವತ್ತುಗಳನ್ನು ಹೊರತುಪಡಿಸಿ ಬಿ , ಸಿ, ಡಿ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಎಲ್ಲವೂ ಒಟ್ಟು ಕುಟುಂಬದ ಸ್ವತ್ತಿನಲ್ಲಿಯೇ ಪಡೆಯಲಾಗಿದೆ ಎಂದು. 2 ಮತ್ತು 3 ನೇ ಪ್ರತಿವಾದಿಗಳಿಗೆ ವಿನಾಕರಣ ತೊಂದರೆ ನೀಡಬೇಕೆಂಬ ದುರುದ್ದೇಶದಿಂದ ಯಾವುದೇ ಹಕ್ಕು ಸ್ವಾಧೀನ ಇಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.